ಅಭಿಯಾಚನೆ ಕ್ರಮಾಂಕ ೫೨—ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೦೨,೦೦,೦೧೦ ರೂ ಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೨೦ ರೂ ಗಳಿಗಿಂತ ಮಿಗಾರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೫೩—ಪುನರ್ವಸತಿ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೪೩,೦೦೦ ರೂ ಗಳಿಗಿಂತ ಮಿಗಾರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹುಣಸೂರಿನಲ್ಲಿರುವ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ.

೨೦೨೦. ಶ್ರೀಮತಿ ಸುಮಾವಸಂತ (ವಿರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನಾಗರಹೊಳೆ ಮತ್ತು ಸುತ್ತ ಮುತ್ತ ಅರಣ್ಯ ಪ್ರದೇಶಗಳು ಕೊಡಗು ಜಿಲ್ಲೆಗೆ ಸೇರಿದ್ದರೂ, ಈ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯು ಹುಣಸೂರಿನಲ್ಲಿ ಇರುವುದು ಸರಿಯೇ ?

ಆ) ವಿರಾಜಪೇಟೆಯಲ್ಲಿ ಸದರಿ ಕಛೇರಿಯಲ್ಲಿ ಜನರ ಅನುಕೂಲತೆಯ ದೃಷ್ಟಿಯಿಂದ ವಿರಾಜಪೇಟೆಗೆ ವರ್ಗಾಯಿಸಬಾರದೇಕೆ ?

ಇ) ವರ್ಗಾಯಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಈ ಹಿಂದೆ ಕೊಡಗು ಜಿಲ್ಲೆಯ ದಕ್ಷಿಣ ಕೊಡಗು ವಿಭಾಗದ ಮುಖ್ಯ ಕಚೇರಿಯು ಮಡಿಕೇರಿಯಲ್ಲಿತ್ತು. ೧೯೬೧ರಲ್ಲಿ ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣ, ಹುಣಸೂರು ಮತ್ತು ಕೆ. ಆರ್. ನಗರ ತಾಲ್ಲೂಕುಗಳ ಅರಣ್ಯ ಪ್ರದೇಶಗಳು ಈ ವಿಭಾಗಕ್ಕೆ ಸೇರ್ಪಡೆಯಾದಾಗ ವಿಸ್ತೃತ ದಕ್ಷಿಣ ಕೊಡಗು ವಿಭಾಗದ ಮುಖ್ಯ ಕಚೇರಿಯು ವಿಭಾಗದ ಹೆಸರನ್ನು ಹುಣಸೂರು ವಿಭಾಗ ಎಂದು ಬದಲಾಯಿಸಿ ಕೇಂದ್ರ ಸ್ಥಾನವಾದ ಹುಣಸೂರಿಗೆ ಸ್ಥಳಾಂತರಿಸಲಾಯಿತು. ಇದಕ್ಕೂ ಮುಖ್ಯವಾಗಿ ಇಲಾಖೆಯ ದೊಡ್ಡ ಪ್ರಮಾಣದ ವನ್ಯ ಸಂಗ್ರಹಾಲಯ ಹುಣಸೂರಿನಲ್ಲಿ ಇದ್ದು, ಅದರ ಉಸ್ತುವಾರಿಗೆ ವಿಭಾಗೀಯ ಅರಣ್ಯ ಕಛೇರಿಯು ಹುಣಸೂರಿನಲ್ಲಿಯೇ ಇರಬೇಕೆಂಬುದು ಒಂದು ಕಾರಣವಾಗಿದೆ.

ಇದಲ್ಲದೆ, ನಾಗರಹೊಳೆ ಮತ್ತು ಕಲ್ಲಹಳ್ಳಿ ವಲಯಗಳ ಅರಣ್ಯ ರಕ್ಷಣೆಗೆ ವಿರಾಜಪೇಟೆಗಿಂತ, ಹುಣಸೂರೇ ಸರಿಯಾದ ಕೇಂದ್ರ ಸ್ಥಾನವಿರುವುದು ಸೂಕ್ತ. ಕೊಡಗಿನ ಉಳಿದ ತಿತಿಮತಿ ವಲಯ

ಕೂಡಾ ಹುಣಸೂರಿನಿಂದ ಬಹಳ ದೂರವೇನು ಇರುವುದಿಲ್ಲ. ಆದೂ ಆಲ್ಲದೆ, ಸುಮಾರು ನಾಲ್ಕು ವರ್ಷಗಳ ಹಿಂದೆ ಹುಣಸೂರು ವಿಭಾಗದಿಂದ ಕೊಡಗಿನ ಕೆಲವು ಗ್ರಾಮಗಳನ್ನು ಮಡಿಕೇರಿ ವಿಭಾಗಕ್ಕೆ ವರ್ಗಾಯಿಸಿ ಶ್ರೀಮಂಗಲ ವಲಯವನ್ನು ನಿರ್ಮಿಸಿದೆ.

೫) ಉದ್ಭವಿಸುವುದಿಲ್ಲ.

ಶ್ರೀಮತಿ ಸುಮಾ ವಸಂತ್.—ಸನ್ಮಾನ್ಯ ಅಧ್ಯಕ್ಷರೇ, ಇದು ಸಾರ್ವಜನಿಕರ ಸಾಕಷ್ಟು ದಿನಗಳ ಬೇಡಿಕೆಯಾಗಿದೆ. ಪಿರಿಯಾಪಟ್ಟಣ, ಹುಣಸೂರು, ಕೆ. ಆರ್. ನಗರಕ್ಕೆ ಬೇಕಾದರೆ ಹುಣಸೂರಿನಲ್ಲಿ ಕೇಂದ್ರಸ್ಥಾನ ಇರಬಹುದು. ಆದರೆ ವೀರರಾಜಪೇಟೆ ಕ್ಷೇತ್ರದ ಜನರು ಹುಣಸೂರಿಗೆ ಹೋಗಿ ಬರುವುದಕ್ಕೆ ತ್ರಾಸವಾಗುತ್ತದೆ. ಈ ಕಚೇರಿಯನ್ನು ವೀರರಾಜಪೇಟೆಯಲ್ಲಿ ಸ್ಥಾಪಿಸಬೇಕು, ಇಲ್ಲದಿದ್ದರೆ ಇದನ್ನು ಮಡಿಕೇರಿಗೆ ವರ್ಗಾಯಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯೆಯರ ಸೂಚನೆಯನ್ನು ನಾನು ಗಮನದಲ್ಲಿಡುತ್ತೇನೆ.

ದಾವಣಗೆರೆಯಲ್ಲಿ ಮುಚ್ಚಿರುವ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಪ್ರಾರಂಭಿಸುವ ಕುರಿತು.

೧೯೭೮. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಭಾರಿ ವಸ್ತ್ರ ಮಾಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಾವಣಗೆರೆಯಲ್ಲಿ ಕಳೆದ ಒಂದು ವರ್ಷದಿಂದ ಮುಚ್ಚಿರುವ ಬಟ್ಟೆ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಮುಚ್ಚಿರುವ ಗಿರಣಿಗಳನ್ನು ಪುನರ್ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿದ್ದಲ್ಲಿ, ಆ ಪೈಕಿ ಪುನರ್ ಪ್ರಾರಂಭಿಸಿದ ಗಿರಣಿಗಳ ಸಂಖ್ಯೆ ಎಷ್ಟು ; ಮತ್ತು ಮುಚ್ಚಿರುವ ಗಿರಣಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು.?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೩ ಗಿರಣಿಗಳು.

ಆ) ಗಣೇಶ ಜವಳಿ ಗಿರಣಿ ಹಾಗೂ ಸಿದ್ದೇಶ್ವರ ಜವಳಿ ಗಿರಣಿಗಳು ರೋಗಗ್ರಸ್ಥ ಕೈಗಾರಿಕಾ ಕಂಪನಿಗಳ (ವಿಶೇಷ ಅವಕಾಶ) ಕಾಯಿದೆ ೧೯೮೫ರ ಅಡಿಯಲ್ಲಿ ಕೈಗಾರಿಕಾ ಮತ್ತು ಆರ್ಥಿಕ ಪುನರ್ ರಚನಾ ಮಂಡಲಿಗೆ ಅರ್ಜಿ ಸಲ್ಲಿಸಿವೆ. ಕೈಗಾರಿಕಾ ವ.ತ್ತು ಆರ್ಥಿಕ ಪುನರ್ ರಚನಾ ಮಂಡಲಿಯು (ಬಿಐಎಫ್‌ಆರ್) ಘಟಕಗಳ ಪುನರುಜ್ಜೀವನ ಯೋಜನೆಗಳನ್ನು ರೂಪಿಸಿದಂತಹ ಸಂದರ್ಭಗಳಲ್ಲಿ ಅಂತಹ ಗಿರಣಿಗಳಿಗೆ ಕೆಲವೊಂದು ಸೌಲಭ್ಯ ರಿಯಾಯಿತಿಗಳನ್ನು ನೀಡುವ ವಿಚಾರವು ಪರಿಶೀಲನೆಯಲ್ಲಿದೆ. ಜಿಗಟೇರಿ ಜವಳಿ ಗಿರಣಿಗೆ ಸಂಬಂಧಿಸಿದಂತೆ ಪುನರುಜ್ಜೀವನ ವರದಿಯು ತಯಾರಿಕೆಯಲ್ಲಿದೆ.

ಇ) ಯಾವುದೇ ಗಿರಣಿಗಳು ಪುನರ್ ಆರಂಭವಾಗಿಲ್ಲ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ದಾವಣಗೆರೆಯ ಮೂರು ಮಿಲ್‌ಗಳು ಸುಮಾರು ಒಂದು ವರ್ಷದಿಂದ ಮುಚ್ಚಿವೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರವಲ್ಲಿ ಸಹ ಇದನ್ನು ಹೇಳಿದ್ದಾರೆ. ಬಿ.ಐ.ಎಫ್.ಆರ್. ಘಟಕಗಳ ಪುನರ್ ಜೀವನ ಗೊಳಿಸುವುದಕ್ಕೆ ಯೋಜನೆ ರೂಪಿಸಿದ್ದೇವೆಂದು ಸಹ ಹೇಳಿದ್ದಾರೆ. ಈ ಮಿಲ್‌ಗಳ ಮಾಲೀಕರು ಕಾರ್ಮಿಕ ಮಂತ್ರಿಗಳು ಸಭೆ ಕರೆದಾಗ ಬರುತ್ತಿಲ್ಲ, ಅವರಿಗೆ ಈ ಮಿಲ್‌ಗಳು ನಡೆಸುವುದಕ್ಕೆ ಉದ್ದೇಶವಿದೆಯೋ ಇಲ್ಲವೋ ಗೊತ್ತಿಲ್ಲ. ಮಿಲ್‌ಗಳನ್ನು ನಡೆಸುವ ಉದ್ದೇಶ ಅವರಿಗೆ ಇರದಿದ್ದರೆ ಆ ಮಿಲ್‌ಗಳನ್ನು ಬೇರೆಯವರು ನಡೆಸುವುದಕ್ಕೆ ಸರ್ಕಾರ ಏನಾದರೂ ಅವಕಾಶ ಮಾಡಿ ಕೊಡುತ್ತದೆಯೇ ? ಈ ಮಿಲ್‌ಗಳು ಮುಚ್ಚಿ ಒಂದು ವರ್ಷವಾಗಿರುವುದರಿಂದ ಮಿಲ್‌ನಲ್ಲಿ ಕೆಲಸ ಮಾಡತಕ್ಕಂಥ ಸುಮಾರು ಮೂರು ಸಾವಿರ ಕಾರ್ಮಿಕರ ಪೈಕಿ ಅನೇಕ ಜನ ಸತ್ತಿದ್ದಾರೆ, ಕೆಲವರು ಬಾವಿಗೆ ಬಿದ್ದು ಸತ್ತಿದ್ದರೆ ಇನ್ನು ಕೆಲವರು ಸಂಸಾರ ನಿರ್ವಹಣೆ